ಒ.ಎಸ್. ನಂ.164/2014
ಪಿಡಬ್ಲು-2

ದಿನಾಂಕ 05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ಈ ದಾವೆಯನ್ನು ಮಲ್ಲಪ್ಪರವರು ನಾಗಪ್ಪರವರ ಮೇಲೆ ಮಾಡಿರುತ್ತಾರೆ. ಈ ದಾವೆಯನ್ನು ಮಲ್ಲಪ್ಪರವರು ಒಬ್ಬರೆ ನಾಗಪ್ಪರವರ ಮೇಲೆ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ಮಲ್ಲಪ್ಪರವರು ನಾಗಪ್ಪ, ಯಲ್ಲಪ್ಪ ಮತ್ತ ಶಾಂತಗೌಡರವರ ಮೇಲೆ ದಾವೆ ಮಾಡಿರುತ್ತಾರೆ. ವಾದಿ ಯಾವ ದಾವೆ ಮಾಡಿದ್ದಾರೆ ಎಂದರೆ ಸಾಕ್ಷಿ ಪಾನಶಾಪ ಡಬ್ಬಿ ಇಟ್ಟಿದ್ದರಿಂದ ದಾವೆ ಮಾಡಿರುತ್ತಾರೆ. ಸದರಿ ಡಬ್ಬಿ 8 ಪೂಟು ಉದ್ದ 5 ಪೂಟು ಅಗಲ ಇರುತ್ತದೆ. ಸದರಿ ಡಬ್ಬಿಯನ್ನು ಯಾವ ದಿನಾಂಕದಂದು ಇಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಬ್ಬಿಯನ್ನು 1ನೆ ಪ್ರತಿವಾದಿ ಇಟ್ಟಿರುತ್ತಾನೆ. ವಾದಿ 2 ಮತ್ತು 3ನೆ ಪ್ರತಿವಾದಿಯರ ಮೇಲೆ ತಿಪ್ಪೆ ಜಾಗದ ಸಲುವಾಗಿ ದಾವೆ ಮಾಡಿರುತ್ತಾರೆ. 2 ಮತ್ತು 3ನೆ ಪ್ರತಿವಾದಿಯರು ತಿಪ್ಪೆಯನ್ನು ತೆಗೆದಿರುತ್ತಾರೆ. ಪಾನ ಶಾಪ ಡಬ್ಬಿ ಇಟ್ಟ ಬಗ್ಗೆ ವಾದಿ ಹೇಳಿದ ಮೇಲೆ ನನಗೆ ಗೊತ್ತಾಗಿರುತ್ತದೆ. ನನಗೆ ವಾದಿ ಡಬ್ಬಿ ಇಟ್ಟ ಬಗ್ಗೆ 4-5 ವರ್ಷಗಳ ಹಿಂದೆ ನನಗೆ ಹೇಳಿರುತ್ತಾರೆ. ಸದರಿ ದಾವೆ ಯಾವ ದಿನಾಂಕದಂದು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಕೇಸು ನಡೆದು 5-6 ವರ್ಷಗಳಾಗಿರುತ್ತವೆ.

ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಸುವ ಸಮಯದಲ್ಲಿ ವಾದಿ ಸಲ್ಲಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ನನ್ನ ಹಾಗೂ 1ನೆ ಪ್ರತಿವಾದಿ ಜೊತೆ ಸಂಬಂಧ ಸರಿಯಿಲ್ಲ ಎಂದರೆ ಸಾಕ್ಷಿ ಸಂಬಂಧ ಸರಿ ಇದೆ ಎಂದು ಹೇಳುತ್ತಾರೆ. ವಾದಿಯರ ಜೊತೆ ನನ್ನ ಸಂಬಂಧ ಸರಿಯಾಗಿದೆ ಎಂದರೆ ಸರಿ. ವಾದಿ ಮಾಡಿದ ದಾವೆ ಹಾಗೂ ಸಾಕ್ಷಿ ಪ್ರಮಾಣ ಪತ್ರಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1ನೆ ಪ್ರತಿವಾದಿ ಡಬ್ಬಿ ಇಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ

ಒ.ಎಸ್. ನಂ.164/2014
ಪಿಡಬ್ಲು-3

ದಿನಾಂಕ 05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ನನ್ನ ಸಾಕ್ಷಿ ಪ್ರಮಾಣ ಪತ್ರ ನಾನೆ ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಸುವಾಗ ವಾದಿ ನನ್ನ ಜೊತೆಯಲ್ಲಿದ್ದ. ನಾನು ವಾದಿ ಸಲ್ಲಿಸಿದ ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ ಮತ್ತು ದಾಖಲೆಗಳನ್ನು ನೋಡಿರುತ್ತೇನೆ. ಡಬ್ಬಿ ಕಿತ್ತಬೇಕೆಂದು ವಾದಿ ಈ ದಾವೆಯಲ್ಲಿ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ನಡುವೆ ಸಂಬಂಧ ಚೆನ್ನಾಗಿಲ್ಲ ಎಂದರೆ ಮೊದಲು ಸರಿ ಇತ್ತು ದಿನಾಂಕ 05.04.2025 ರಿಂದ ನನ್ನ ಹಾಗೂ ಪ್ರತಿವಾದಿಯ ನಡುವೆ ಸಂಬಂಧ ಚೆನ್ನಾಗಿಲ್ಲ. ಗುನ್ನೆ ನಂ.238/2016 ರಲ್ಲಿ ಪ್ರತಿವಾದಿಯರು ನನ್ನ ವಿರುದ್ದ ದೂರು ಸಲ್ಲಿಸಿದ್ದು ಅದರಲ್ಲಿ ನಾನು 8ನೆ ಆರೋಪಿ ಇರುತ್ತೇನೆ ಎಂದರೆ ಸರಿ. ಇತರ 7 ಜನ ಆರೋಪಿಗಳು ಇದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ನ್ಯಾಯಾಲಯದಿಂದ ಎ ಬಿ ಸಿದ್ರಾಮ ರೆಡ್ಡಿ ವಕೀಲರ ಮುಖಾಂತರ ಜಾಮೀನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗುನ್ನೆಯಲ್ಲಿ ಪೋಲಿಸರು ನನಗೆ ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಶಾಂತಮ್ಮ ಮತ್ತು ಕರ್ಣಮ್ಮರವರು ಒ ಎಸ್ ನಂ.161/2003 ನನ್ನ ವಿರುದ್ದ ಪಾಲು ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 1ನೆ ಪ್ರತಿವಾದಿಯು ಶಾಂತಮ್ಮ ಮತ್ತು ಕರ್ಣಮ್ಮರವರಿಗೆ ಸಹಾಯ ಮಾಡಿದ್ದರಿಂದ ನನ್ನ ಹಾಗೂ 1ನೆ ಪ್ರತಿವಾದಿಯ ನಡುವೆ ದ್ವೇಷವಿರುತ್ತದೆ ಎಂದರೆ ಸರಿಯಲ್ಲ.

ವಾದಿ ಮಾಡಿದ ದಾವೆ ಹಾಗೂ ಸಾಕ್ಷಿ ಪ್ರಮಾಣ ಪತ್ರಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ 1ನೆ ಪ್ರತಿವಾದಿಯ ನಡುವೆ ದ್ವೇಷವಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ